**ಕೆಪಿಎಲ್‌ಸಿ/ಎಡಿಎಂ/ಸಿಆರ್/17/13–14** **ದಿನಾಂಕ:10–07–2015**

ಮಾನ್ಯರೇ,

**ವಿಷಯ:–** ಅಕ್ರಮ ಹಾಗೂ ಅನಧಿಕೃತ ಭೂ ಮಂಜೂರಾತಿ ಕಡತಗಳನ್ನು ಸೃಷ್ಟಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಗೆ ವರ್ಗಾಯಿಸಿರುವ ಪ್ರಕರಣಗಳ ಬಗ್ಗೆ ಜರುಗಿಸಿದ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವ ಬಗ್ಗೆ.

**ಉಲ್ಲೇಖ:**
1. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರ ಪತ್ರ ಸಂಖ್ಯೆ ಆರ್‌ಡಿ/345/ಎಲ್‌ಜಿಬಿ/2011/ಪಿ–2/, ದಿನಾಂಕ: 24.11.2012.
2. ಈ ನಿಗಮದಿಂದ ಬರೆದಿರುವ ಪತ್ರಗಳು ದಿನಾಂಕ: 22.10.2013, 11.3.2014, 24.4.2014. 30.06.2014, 29.10.2014.

****

ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರ ಜಿಲ್ಲೆಗೆ ಕಡತಗಳ ವರ್ಗಾವಣೆ ಸಮಯದಲ್ಲಿ ದೊರೆತ ಸೃಷ್ಠಿತ ಹಾಗೂ ಅಕ್ರಮ ಭೂ ಮಂಜೂರಾತಿ ಕಡತಗಳಿಗೆ ಸಂಬಂಧಪಟ್ಟಂತೆ 1437–38 ಎ.ಗುಂ. ಸರ್ಕಾರಿ ಜಮೀನಿಗೆ ಖಾಸಗಿ ವ್ಯಕ್ತಿಗಳ ಹೆಸರಿಗೆ ಆಗಿರುವ ಖಾತೆ ಬದಲಾವಣೆ ವಿಚಾರವಾಗಿ ಉಲ್ಲೇಖ(1)ರಲ್ಲಿ ನಮೂದಿಸಿರುವ ದಿನಾಂಕ: 24.11.2012ರ ಪತ್ರದಲ್ಲಿ (ಪ್ರತಿ ಲಗತ್ತಿಸಿದೆ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಈ ಮುಂದಿನ ಸೂಚನೆಗಳನ್ನು ನೀಡಿರುತ್ತಾರೆ:

> "You are directed to take immediate action as follows:
>
> (1) Take over possession of 237 acres 21 guntas of vacant land.
>
> (2) Initiate action under Rule 25 of Karnataka Land Grant Rules, 1969 wherever land grant has been made in violation of norms.
>
> (3) Book criminal cases under Section 192(A) and 192(B) of Karnataka Land Revenue Act, 1964 against illegal grantees based on the outcome of the proceedings under Section 136(3) of the Karntaka Land Revenue Act, 1964 and also against the officers responsible for such fraudulent acts;
>
> (4) Initiate action under Section 136(3) of the Karnataka Land Revenue Act, 1964 in respect of 1437 acres 38 guntas of land against the illegal grantees who have got the khatas changed in their names.
>
> You are also directed to take action to classify the extent of 237-21 acres as Government land in 'Bhoomi' records. Necessary entries may be made in column11 of the land records as well as in 'Bhoomi' software mentioning that the lands in the above Survey Numbers are under litigation and therefore no transaction to be effected in these Survey Numbers."

ಸರ್ಕಾರದ ಸೂಚನೆ ಅನ್ವಯ ಈ ವಿಷಯದಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ತಿಳಿಸುವಂತೆ ಈ ನಿಗಮದಿಂದ ದಿನಾಂಕ: 22.10.2013, 11.3.2014, 22.4.2014. 30.06.2014 ಮತ್ತು 29.10.2014ರಂದು ಪತ್ರಗಳನ್ನು ಬರೆಯಲಾಗಿರುತ್ತದೆ. ಆದರೆ, ಈ ವಿಷಯದಲ್ಲಿ ಜರುಗಿಸಿದ ಕ್ರಮಗಳ ಬಗ್ಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ.

ಈ ವಿಷಯ ಗಂಭೀರ ಸ್ವರೂಪದ್ದಾಗಿರುತ್ತದೆ. ಆದ್ದರಿಂದ ತಾವು ಖುದ್ದು ಗಮನ ನೀಡಿ, ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ದಿನಾಂಕ: 24.11.2012ರ ಪತ್ರದಲ್ಲಿ ನೀಡಿರುವ ಸೂಚನೆಗಳ ಅನ್ವಯ ಜರುಗಿಸಿದ ಕ್ರಮಗಳ ಬಗ್ಗೆ ಈ ಪತ್ರ ತಲುಪಿದ 03 ದಿನಗಳೊಳಗಾಗಿ ಮಾಹಿತಿ ಒದಗಿಸುವುದು.

ತಮ್ಮ ವಿಶ್ವಾಸಿ,

ಸಹಿ/–

**ಶ್ರೀ ವಿ.ಶಂಕರ್, ಭಾ.ಆ.ಸೇ.,**
ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

(1) ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಅವಗಾಹನೆಗಾಗಿ ಸಲ್ಲಿಸಿದೆ.
(2) ಪ್ರತಿಯನ್ನು ಶ್ರೀಮತಿ ನೀಲಾ ಮಂಜುನಾಥ್, ಭಾ.ಆ.ಸೇ., ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಉತ್ತರ/ದಕ್ಷಿಣ ಉಪ ವಿಭಾಗ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ರವರಿಗೆ ಕಳುಹಿಸುತ್ತಾ ಮೇಲ್ಕಾಣಿಸಿದ ಕ್ರಮ ಸಂಖ್ಯೆ(3)ರಲ್ಲಿ ತಿಳಿಸಿರುವಂತೆ ಕ.ಭೂ.ಕಂ.ಕಾಯ್ದೆ, 1964ರ ಕಲಂ 192(ಎ) ಮತ್ತು 192(ಬಿ) ಅಡಿಯಲ್ಲಿ ಕ್ರಿಮಿನಲ್ ಮೊದ್ದಮೆಗಳನ್ನು ಹೂಡಿದ ಬಗ್ಗೆ, ಹಾಗೂ ಕ್ರಮ ಸಂಖ್ಯೆ(4)ರಲ್ಲಿ ತಿಳಿಸಿದಂತೆ ಕಲಂ 136(3)ರ ಅಡಿಯಲ್ಲಿ ಪ್ರಕರಣ ಪ್ರಾರಂಭ ಮಾಡಿದ ಬಗ್ಗೆ, ಪ್ರಾರಂಭ ಮಾಡಿದ್ದಲ್ಲಿ ಪ್ರಕರಣಗಳ ಹಂತದ ಬಗ್ಗೆ ಹಾಗೂ ಇತ್ಯರ್ಥಪಡಿಸಿದ ಪ್ರಕರಣಗಳ ಬಗ್ಗೆ ಈ ಪತ್ರ ತಲುಪಿದ 3 ದಿನಗಳೊಳಗಾಗಿ ಮಾಹಿತಿ ಒದಗಿಸಲು ಕೋರಿದೆ.
(3) ಪ್ರತಿಯನ್ನು ಶ್ರೀ ಜಿ.ವಿ.ನಾಗರಾಜ್, ವಿಶೇಷ ಜಿಲ್ಲಾಧಿಕಾರಿ(ಜಾರಿದಳ)(ಪ್ರಭಾರ), ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ ಕಳುಹಿಸುತ್ತಾ ಮೇಲ್ಕಾಣಿಸಿರುವ ಎಲ್ಲಾ ಅಂಶಗಳ ಬಗ್ಗೆ ಜರುಗಿಸಿರುವ ಮಾಹಿತಿಗಳನ್ನು ಕ್ರೋಢೀಕರಿಸಿ, ಈ ಪತ್ರ ತಲುಪಿದ 3 ದಿನಗಳೊಳಗಾಗಿ ಈ ನಿಗಮಕ್ಕೆ ಸಲ್ಲಿಸಲು ಕೋರಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿ.